ಮಾಡತೊಡಗಿದಳು. ಆದರೆ ಮತ್ತೊಂದು ದಿನ ಶಾರದೆಗೆ ಶಾಕ್ ಹೊಡೆಯುವಂತಹ ದೂರೊಂದು ಭಾಗೀಚಿಕ್ಕಿಯ ಕಡೆಯಿಂದ ಬಂದು ನಿಂತಿತು. 'ನಿನ್ನ ಮಾವನ ನಡತೆ ಅಷ್ಟೊಂದು ಸರಿ ಇದೆ ಅಂತ ನಂಗೆ ಅನ್ಸಲ್ಲ. ಆತ ಹೋಗುವಾಗ ಬರುವಾಗ ನನ್ನ ಕೈಯ್ಯಿ ಮೈಯ್ಯಿ ಮುಟ್ಟಿ ಮಾತಾಡ್ತಾನೆ' ಎಂದಿದ್ದಳು. ಆ ದೂರು ಆ ಮನೆಯ ನೈತಿಕತೆಯನ್ನೇ ಪ್ರಶ್ನಿಸಿ ನೋಡುವಂತಿತ್ತು. ಮಾವನ ಲೇಟ್ ನೈಟ್ ಫಿಲಂಗಳ ಹುಚ್ಚನ್ನು ಈಗಾಗಲೇ ಕಣ್ಣಾರೆ ಕಂಡಿದ್ದ ಶಾರದೆಗೆ ಇದು ಇದ್ದರೂ ಇರಬಹುದೇನೋ ಎಂದು ಒಂದು ಕ್ಷಣ ಅನ್ನಿಸಿ ಹೋಯಿತು. ಆದರೆ ತಾನೀಗ ಅದನ್ನು ಬೆಂಬಲಿಸಿದರೆ ಕಟ್ಟಿಕೊಂಡ ಬದುಕಿನ ಗೌರವ ಬೀದಿಗೆ ಬೀಳುವುದರಲ್ಲಿ ಸಂಶಯವೇ ಇಲ್ಲ ಎಂದುಕೊಳ್ಳುತ್ತ ಅದನ್ನು ಮರೆ ಮಾಚುವ ಹಾಗೆ, 'ಬಾಯಿಗೆ ಬಂದಿದ್ದು ಹೇಳಬೇಡ ಚಿಕ್ಕಿ, ನಿನ್ನ ಹೊಲಸು ಬಾಯಿಂದ್ಲೇ ಮಾವ ಆ ಮನೆಯಿಂದ ನಿನ್ನ ಓಡಿಸಿದ್ದು' ಶಾರದೆ ಕಟುವಾಗಿ ಹೇಳಿದ್ದಳು. ಆದರೆ ಅಲ್ಲಿಗೆ ಸುಮ್ಮನಾಗದ ಚಿಕ್ಕಿ ಮಾತ್ರ ತನ್ನನ್ನು ತಾನು ಸಮರ್ಥಿಸಿಕೊಳ್ಳುತ್ತಲೇ, 'ಪುಟ್ಟಿ ನಿಂಗೆ ಸುಳ್ಳು ಹೇಳಿ ನಂಗೇನಾಗ್ಬೇಕಿದೆ ಹೇಳು, ನಿನ್ನ ಮತ್ತು ನಿನ್ನ ಅಜ್ಜಯ್ಯನ ಮನೆಯ ಉಪ್ಪು ತಿಂದಿದ್ದೀನಿ' ಎನ್ನುತ್ತಲೇ 'ನಿನ್ನ ಮಾವ ನನ್ನನ್ನು ಓಡಿಸಿದ್ದು ನಂಗೆ ಬಾಯಿ ಜಾಸ್ತಿ ಅಂತಲ್ಲ, ಅವನ ಜೊತೆ ರಾತ್ರಿ ಹಾವು ಏಣಿ ಆಡಲಿಲ್ಲ ಅಂತ' ಎಂದು ಹೇಳಿ ಶಾರದೆಯ ನಂಬಿಕೆಯ ಜೇನು ಗೂಡಿಗೆ ರಪ್ ಎನ್ನುವಂತೆ ಕಲ್ಲೊಂದನ್ನು ಎಸೆದುಬಿಟ್ಟಿದ್ದಳು. ಆ ಗಳಿಗೆಯ ಭಾರವನ್ನು ತಡೆದುಕೊಳ್ಳಲಾಗದ ಸ್ಥಿತಿಗೆ ತಲುಪಿದ ಶಾರದೆ ತನ್ನನ್ನೇ ಮತ್ತೆ ಮತ್ತೆ ಸಾವರಿಸಿಕೊಳ್ಳುತ್ತ ಭಾಗೀಚಿಕ್ಕಿಯನ್ನು ಬೈದು ಸುಮ್ಮನಾಗಿಸಿದಳಾದರೂ ಅವಳ ತಲೆಯಲ್ಲಿ ತನ್ನ ಮಾವನ ಕುರಿತಾಗಿ ಜೀರುಂಡೆ ಹಕ್ಕಿಯೊಂದು ಸಣ್ಣಗೆ ಗುಂಯ್ಗುಡಲು ಶುರು ಮಾಡಿ ಅನುಮಾನದ ಬಲೆಯನ್ನು ನೇಯಲು ಶುರು ಮಾಡಿತು. ಶಾರದೆ ಗದರಿದ ಮೇಲೆ ಒಂದಿಷ್ಟು ದಿನ ಯಾವ ದೂರುಗಳು ಬರಲಿಲ್ಲ. ಸದ್ಯ ರಾಮಾಯಣ ಇಲ್ಲಿಗೆ ಮುಗಿಯಿತಲ್ಲ ಎಂದುಕೊಂಡು ತನ್ನ ಪಾಡಿಗೆ ತಾನು ಆಸ್ಪತ್ರೆಗೆ ಹೋಗಿ ಬಂದು ಮಾಡತೊಡಗಿದಳು. ಮತ್ತೊಂದು ದಿನ ಶಾರದೆ ಡೇ ಡ್ಯೂಟಿ ಮುಗಿಸಿ ಸಂಜೆ ಸುಸ್ತಾಗಿ ಮನೆಗೆ ಬಂದಿದ್ದಳಷ್ಟೇ—ಅಷ್ಟು ಹೊತ್ತಿಗೆ, 'ನೋಡು ಶಾರಿ ನಿನ್ನ ಚಿಕ್ಕಿಗೆ ಹೇಳು ನಾನು ಫೋನು ಮಾಡೋದನ್ನು ಕದ್ದು ಕೇಳೋದನ್ನ ಬಿಡಕ್ಕೆ' ಎನ್ನುತ್ತ ಅವಳ ಗಂಡ ಕೋಲಾಹಲ ಎಬ್ಬಿಸಿದ್ದ. ಮೊದಲೇ ತಲೆ ಚಿಟ್ಟು ಹಿಡಿದು ಕೆಲಸದಿಂದ ಬಂದಿದ್ದ ಶಾರದೆಗೆ ಮನಸ್ಸು ಮೊಸರಿನ ಗಡಿಗೆಯಾಯಿತು. 'ನಿಂಗ್ಯಾಕೆ ಇಲ್ಲದ ತಲೆಹರಟೆ ಚಿಕ್ಕಿ' ಎಂದು ಜೋರಾಗಿ ಕೇಳಿ ಗಂಡನನ್ನು ಸಮಾಧಾನಗೊಳಿಸುವ ಪ್ರಯತ್ನ ಮಾಡಿದ್ದಳು. ಶಾರದೆಯ ಮಾತಿಗೆ ಪ್ರತಿ ಆಡದೆ ಸುಮ್ಮನೆ ನಿಂತಿದ್ದ ಭಾಗೀಚಿಕ್ಕಿ, 'ಕೂಗಾಡಿದ ತಕ್ಷಣಕ್ಕೆ ಸತ್ಯ ಸುಳ್ಳಾಗುವುದಿಲ್ಲ' ಎಂದು ತನ್ನಲ್ಲೇ ಗೊಣಗಿಕೊಂಡು ಅಡಿಗೆ ಮನೆ ಸೇರಿದ್ದಳು. ಅವಳ ವಾಕ್ಯ ಶಾರದೆಯ ಮನಸ್ಸಿನಲ್ಲಿ ಗಟ್ಟಿ ಕೂತಿತು. ಅಂದರೆ ಅವಳ ಮಾತಿನ ಅರ್ಥವೇನು ಎಂದು ನೂರಾರು ಬಾರಿ ಯೋಚಿಸಿ ಹೈರಾಣಾಗಿದ್ದಳು. ಮೂರು ತಿಂಗಳಿಗೊಮ್ಮೆಯೂ ತನ್ನ ಬಳಿ ಬಾರದ ಇವನಿಗೆ ಬೇರೆ ಎಲ್ಲಾದರೂ... ಎನ್ನುವ ಸಂಶಯದ ಕೀಟವೊಂದು ಕೊರೆಯಲು ಆರಂಭಿಸಿತು. ಆಕೆ ತನ್ನ ಗಂಡನನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡತೊಡಗಿದಳು. ಆದರೆ ಅಂತಹ ಯಾವ ಸುಳಿವೂ ಸಿಕ್ಕದೆ ಹೋದಾಗ ಈ ಭಾಗೀಚಿಕ್ಕಿಗೆ ತಲೆ ಕೆಟ್ಟಿರುವುದು ಹೌದೇ ಹೌದು; ಇಂತಹವಳನ್ನು ಕರೆ ತಂದು ಎಂತಹ ತಪ್ಪು ಮಾಡಿದೆ ಎಂದು ಪೇಚಾಡತೊಡಗಿದಳು. ಅದು ದಿನ ದಿನಕ್ಕೂ ಜಾಸ್ತಿಯಾಗತೊಡಗಿತು. ದೂರುಗಳು ಮನೆಯ ಪ್ರತಿಯೊಂದು ಕಡೆಯಿಂದ ಕೇಳಿ ಬರತೊಡಗಿದವು. ಈ ಎಲ್ಲದಕ್ಕೂ ಶಾರದೆಯೇ ಕಾರಣ ಎನ್ನುವಂತೆ ಆ ಮನೆಯ ಮೂವರು